# ನವೋದ್ಯಮ ಸಂಸ್ಥೆಯಿಂದ ವಿವಿಧ ತರಬೇತಿ

ಹುಬ್ಬಳ್ಳಿ: ದೇಶಪಾಂಡೆ ಪ್ರತಿಷ್ಠಾನದ ಅಂಗ ಸಂಸ್ಥೆ ನವೋದ್ಯಮ ಸಂಸ್ಥೆ ವತಿಯಿಂದ ಸಣ್ಣ ಉದ್ಯಮಿದಾರರಿಗಾಗಿ ಮಾರುಕಟ್ಟೆ ಸೌಲಭ್ಯ, ಹಣಕಾಸಿನ ಸಹಾಯ ಮತ್ತು ಪ್ರಾತ್ಯಕ್ಷಿಕೆ ಹಾಗೂ ವಿವಿಧ ತರಬೇತಿಗಳನ್ನು ಹಮ್ಮಿಕೊಂಡಿದೆ.

ಇಲ್ಲಿಯವರೆಗೂ 5000ಕ್ಕೂ ಹೆಚ್ಚು ಉದ್ಯಮಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಹುಬ್ಬಳ್ಳಿ–ಧಾರವಾಡದ ಆಸಕ್ತ ಮಹಿಳೆಯರು ಮತ್ತು ಪುರುಷರಿಗಾಗಿ ನ.19 ರಿಂದ ಡಿ.5ರ ವರೆಗೆ ಡಿಸೈನರ್ ಬ್ಲೌಸ್ ಮತ್ತು ಚಿಕ್ಕ ಮಕ್ಕಳ ಉಡುಪುಗಳನ್ನು ತಯಾರಿಸುವ ತರಬೇತಿ ಹಮ್ಮಿಕೊಂಡಿದೆ. ಈ ತರಬೇತಿ ಪಡೆಯಬಯಸುವವರು ನವೋದ್ಯಮಿ, ದೇಶಪಾಂಡೆ ಪ್ರತಿಷ್ಠಾನ, ಬಿವಿಬಿ ಕಾಲೇಜು ಕ್ಯಾಂಪಸ್, ವಿದ್ಯಾನಗರ, ಹುಬ್ಬಳ್ಳಿ–580021. ದೂರವಾಣಿ ಸಂಖ್ಯೆ: 9449829357/9686243901 ಅವರನ್ನು ಸಂಪರ್ಕಿಸಲು ಕೋರಲಾಗಿದೆ.